ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ವಿಷಯ ಅನುಮೋದನೆಗಾಗಿ ನಗರ ಪಾಲಿಕೆಯ ಕಾಮಗಾರಿ ಸ್ಥಾಯಿಸಮಿತಿಯ ಮುಂದಿದೆ. ಸ್ಥಾಯಿ ಸಮಿತಿಯ ಅನುಮೋದನೆ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಅಂದಾಜು ಪಟ್ಟಿಯನ್ನು ಮಾರ್ಪಾಡು ಮಾಡಿರುವುದರಿಂದ ಮತ್ತು ಗುತ್ತಿಗೆದಾರರು ಕಾಮಗಾರಿ ಕೆಲಸವನ್ನು ಅಪೂರ್ಣ ಮಾಡಿರುವುದರಿಂದ.

ಈ) ಹೌದು ಬಾಕಿ ಉಳಿದಿರುವ ಕಾಮಗಾರಿ ಕೆಲಸವನ್ನು ಇಲಾಖಾ ಮತಿಯಿಂದ ಕಾಮಗಾರಿ ಸಮಿತಿಯ ಅನುಮೋದನೆ ಪಡೆದ ನಂತರ ಪೂರ್ಣಗೊಳಿಸಲಾಗುವುದು.

ಸಬ್-ರಿಜಿಸ್ಟ್ರಾರ್ ಮತ್ತು ಜಿಲ್ಲಾ ನೋಂದಣಿ ಕಛೇರಿಗಳಲ್ಲಿ ಕಂಪ್ಯೂಟರ್ ಅಳವಡಿಕೆ

434-ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಬ್-ರಿಜಿಸ್ಟ್ರಾರ್ ಹಾಗೂ ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ದಾಖಲೆಗಳನ್ನು ಕಾಯ್ದಿರಿಸುವ ವ್ಯವಸ್ಥೆಯು ಸಮರ್ಪಕವಾಗಿದೆಯೇ?

(ಆ) ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಮುಂತಾಗಿ ಸಾರ್ವಜನಿಕರು ಪಡೆಯಬಯಸುವ ದಾಖಲೆ ಪತ್ರಗಳನ್ನು ಸದರಿ ಕಛೇರಿಯಲ್ಲಿ ಎಷ್ಟು ದಿನಗಳಲ್ಲಿ ಒದಗಿಸುವ ವ್ಯವಸ್ಥೆ ಸದ್ಯದಲ್ಲಿ ಜಾರಿಯಲ್ಲಿದೆ.

(ಇ) ಈ ವಿಳಂಬವನ್ನು ತಪ್ಪಿಸಲು ಕಂಪ್ಯೂಟರ್ ಅಳವಡಿಕೆ ಮುಂತಾದ ಆಧುನಿಕ ವ್ಯವಸ್ಥೆಯನ್ನು ಸರ್ಕಾರವು ಮಾಡಲಿಚ್ಛಿಸಿದೆಯೇ?

(ಈ) ವಿಶೇಷತಃ ಬೆಂಗಳೂರು ನಗರದಲ್ಲಿ ಇಂತಹಾ ವ್ಯವಸ್ಥೆಯನ್ನು ಮಾಡಿರುವುದರ ಜೊತೆಗೆ ದಾಖಲೆಗಳನ್ನು ಮೈಕ್ರೋ-ಫಿಲಂ ವ್ಯವಸ್ಥೆಯ ಮೂಲಕ ಸುವ್ಯವಸ್ಥಿತವಾಗಿ ಕಾಯ್ದಿರಿಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹಾಲಿ ಇರುವ ವ್ಯವಸ್ಥೆಯು ದಾಖಲೆಗಳನ್ನು ಕಾಯ್ದಿರಿಸಲು ಸಮರ್ಪಕವಾಗಿದೆ.

ಆ) ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್‌ಗಳನ್ನು ವಿತರಿಸಲು ಮತ್ತು ನೋಂದಣಿಯಾದ ದಸ್ತಾವೇಜುಗಳನ್ನು ಪ್ರತಿ ಮಾಡಿ ಹಿಂತಿರುಗಿಸಲು 10 ದಿವಸಗಳು ಹಾಗೂ ನಕಲು ಪ್ರತಿಗಳನ್ನು ವಿತರಿಸಲು 3 ದಿವಸಗಳ ಕಾಲಾವಕಾಶವನ್ನು ನಿಗಧಿಪಡಿಸಿದೆ.

ಇ) ಪರಿಶೀಲಿಸಲಾಗುವುದು.

ಈ) ಈ ದಿಸೆಯಲ್ಲಿ ಸರ್ಕಾರ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಲು ಸಮಗ್ರ ಚಿಂತನೆ ನಡೆಸಿದೆ.

ರಾಜಾಜಿನಗರಕ್ಕೆ ಸೇರಿದ 10ನೇ ಡಿವಿಜನ್ ತರಕಾರಿ ಮಾರುಕಟ್ಟೆಯ ದುರಸ್ತಿ

441- ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜಾಜಿನಗರಕ್ಕೆ ಸೇರಿದ 10ನೇ ಡಿವಿಜನ್ ಸರಕಾರಿ ಮಾರುಕಟ್ಟೆಯ ಕಟ್ಟಡವು ದುರಸ್ತಿಯಾಗಬೇಕಾಗಿದೆ ಎಂಬುದು ತರಕಾರದ ಗಮನಕ್ಕೆ ಬಂದಿದೆಯೇ?

(ಆ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

(ಇ) ದುರಸ್ತಿ ಕಾರ್ಯವನ್ನು ಕಳೆದ 6 ವರ್ಷಗಳಿಂದಲೂ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ಮತ್ತು ವ್ಯಾಪಾರಿಗಳಿಗೆ ಉಂಟಾಗುತ್ತಿರುವ ಅನಾನುಕೂಲತೆಗಳನ್ನು ಬಗೆಹರಿಸಲು ಸರಕಾರವು ಸಕಾಲಿಕ ಕ್ರಮಗಳನ್ನು ಜರುಗಿಸಲಿಚ್ಛಿಸುತ್ತದೆಯೇ?